ದಿ.27.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಃ ಶ್ರೀ ಎಸ್.ಪಿ, ವಕೀಲರಿಂದ **JDr.No.1** ಪರವಾಗಿ :

1. ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿವೆ ಮತ್ತು ಸತ್ಯವಾಗಿವೆ. ಅದಕ್ಕೆ ಸಹಿ ಮಾಡಿರುತ್ತೇನೆ.

ಪಾಟೀಸವಾಲು ಃ ಶ್ರೀ ಡಿ.ಎಸ್.ಎಸ್, ವಕೀಲರಿಂದ **DHr** ಪರವಾಗಿ ಃ

2. ನಾನು 6 ನೇ ತಗತಿಯವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರುತ್ತದೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ವಕೀಲರಿಗೆ ಮಾಹಿತಿ ಕೆಟ್ಟಿರುತ್ತೇನೆ. ಡಿಹೆಚ್ಆರ್ ರವರಿಂದ ನಾನು ಆರು ಲಕ್ಷ ಎಪ್ಪತ್ತೈದು ಸಾವಿರ ಸಾಲ ಪಡೆದಿದೆ. 2008 ನೇ ಇಸವಿಯಂದು ನಾನು ಸಾಲ ಪಡೆದಿದೆ. ದಿನಾಂಕ ತಿಂಗಳು ನೆನಪಿಲ್ಲ.

3. ಸಾಲ ಪಡೆಯುವಾಗ ಫಾರಂಗಳನ್ನು ಓದಿ ಕೊಂಡಿಲ್ಲ. ನನ್ನ ಅಳಿಯ ಅಲ್ಲಿಯೇ ಇದು ಸಹಿ ಮಾಡು ಎಂದು ಹೇಳಿದ ನಂತರ ಸಹಿ ಮಾಡಿರುತ್ತೇನೆ. ಸಾಲ ಪಡೆಯುವಾಗ ಲಾರಿ ತೆಗೆದುಕೊಳ್ಳಲು ಸಾಲ ತೆಗೆದುಕೊಳ್ಳುತ್ತಿರುವುದಾಗಿ ನನಗೆ ತಿಳಿಸಿಲ್ಲ. ನನ್ನ ಅಳಿಯನಿಗೆ ಓದಲು ಬರುವುದಿಲ್ಲ. ಲಾರಿ ಕಂತನ್ನು ಪೂರ್ತಿ ಕಟ್ಟಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಡಿಹೆಚ್ಆರ್ ರವರು ಲಾರಿ ಜಪ್ತು ಮಾಡಿಕೊಂಡು ಹೋಗಿದ್ದಾರೆ ಎಂದು ಹೇಳುತ್ತಾರೆ.

4. 2008 ನೇ ಇಸವಿಯಿಂದ ಇದುವರೆಗೆ ಎಷ್ಟು ಕಂತು ಕಟ್ಟಿದ್ದೇನೆಂದರೆ ಸಾಕ್ಷಿಯು ಲಾರಿ ಜಪ್ತು ಮಾಡಿಕೊಂಡು ಹೋಗುವವರೆಗೂ ಕಂತನ್ನು ಕಟ್ಟಿದ್ದು, ನಂತರ ಸದರಿ ಲಾರಿ ಜಪ್ತು ಮಾಡಿಕೊಂಡು ಹೋಗಿದ್ದಕ್ಕೆ ಸದರಿ ಸಾಲ ವಶ ಆಗಿರುತ್ತದೆಂದು ಮುಂದಿನ ಕಂತು ಕಟ್ಟಿಲ್ಲ ಎಂದು ಹೇಳುತ್ತಾರೆ. ಸರಿಯಾದ ಕಂತುಗಳನ್ನು ಕಟ್ಟದೇ ಇದ್ದ ಕಾರಣ ಡಿಹೆಚ್ಆರ್ ಕಂಪನಿಯವರು ಲಾರಿ ಜಪ್ತು ಮಾಡಿಕೊಂಡು ಹೋಗಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ.

5. ಲಾರಿ ಜಪ್ತು ಮಾಡಿಕೊಂಡ ಹೋದ ನಂತರ ಸದರಿ ಲಾರಿಯನ್ನು ನಾಲ್ಕು ವರೆ ಲಕ್ಷಕ್ಕೆ ಮಾರಾಟ ಮಾಡಿರುತ್ತಾರೆಂದು ತಿಳಿಯಿತು. ಲಾರಿ ಕಂತುಗಳನ್ನು ಪಾವತಿ ಮಾಡಿದ ಬಗ್ಗೆ ರಶೀದಿ ಹಾಜರುಪಡಿಸಿಲ್ಲ. ಲಾರಿ ಕಂತುಗಳನ್ನು ಕಟ್ಟಿಲ್ಲವಾದ್ದರಿಂದ ಲಾರಿ ಜಪ್ತು ಮಾಡಿದ್ದಾರೆ ಎಂದರೆ ಸರಿ.

6. ಲಾರಿ ಹತ್ತು ಲಕ್ಷ ಬೆಲೆ ಬಾಳುತ್ತಿತ್ತು ಎನ್ನಲು ದಾಖಲೆ ಹಾಜರುಪಡಿಸಿಲ್ಲ. ದಿನಾಂಕ 30.03.2023 ರಂದು ರೂ.32,79,373/- ಅಸಲು+ಬಡ್ಡಿ ಸೇರಿ ಬಾಕಿ ಇದೆ ಎಂದರೆ ನನಗೆ ಹೇಳಲಿಕ್ಕಾಗುವುದಿಲ್ಲ. 2015 ನೇ ಇಸವಿಯಲ್ಲಿ ಆರ್ಬಿಟ್ರೇಷನ್ ಅವಾರ್ಡ್ ಆಗಿ ನನಗೆ ನೋಟೀಸು ಜಾರಿಯಾಗಿತ್ತು ಎಂದರೆ ಸರಿ. ನೋಟೀಸ್ ಜಾರಿ ಆದ ಕೂಡಲೇ ನಾನು ವಕೀಲರ ಮೂಲಕ ಹಾಜರಾಗಿಲ್ಲ ಎಂದರೆ ಸರಿ.

7. ನಾನು ಸಾಲದ ಬಾಕಿ ಪಾವತಿಮಾಡಬೇಕಾಗಿದ್ದು, ಅದಾಗ್ಯೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 30.03.2023 ರಿಂದ ಇಲ್ಲಿಯವರೆಗೂ ನಾನು ರೂ.37,79,373/- ಬಾಕಿ ಇದ್ದು, ಅದರ ಮೇಲೆ ಮುಂದಿನ ಬಡ್ಡಿ ಸಹ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿಯು ತನಗೆ ಯಾವುದೇ ಹಣ ಕೊಡಲು ಸಾಮರ್ಥ್ಯ ಇಲ್ಲ ಎಂದು ಹೇಳುತ್ತಾರೆ.

8. ನಾನು ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ಡಿಹೆಚ್ಆರ್ ಕಂಪನಿಯವರಿಂದ ನಾನು ಸಾಲ ಪಡೆದಿದ್ದು, ಸಾಲ ತೀರಿಸಲು ಸಾಮರ್ಥ್ಯ ಇದ್ದರೂ ಕೂಡ ದುರುದ್ದೇಶದಿಂದ ಸಾಲ ತೀರಿಸಿಲ್ಲ ಎಂದರೆ ಸರಿಯಲ್ಲ.

9. ನನಗೆ ದಾವಣಗೆರೆಯಲ್ಲಿ ಸ್ವಂತ ಮನೆ ಇದೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿದ ಆಧಾರ್ ಕಾರ್ಡ್ ನಲ್ಲಿ ಇರುವ ಮನೆ ವಿಳಾಸ ನನ್ನದೆ ಮನೆ ಆಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.